## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 774/2021

**ಸಾಕ್ಷಿಯನ್ನು ದಿಃ 06.06.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀಮತಿ. RSP ವಕೀಲರಿಂದಃ**

ನಾನು ಮನೆ ಸಂಃ 97, 5ನೇಕ್ರಾಸ್ ಬೊಗಾದಿ 2ನೇ ಹಂತ, ಮೈಸೂರಿನಲ್ಲಿ ವಾಸವಿದ್ದೇನೆ. ನನ್ನ ಖಾಯಂ ವಿಳಾಸ ಹಿಂಡಗುಡ್ಲು ಗ್ರಾಮ. ಅದು ದೊಡ್ಡಹೆಜ್ಜೂರು ಅಂಚೆ, ಹನಗೋಡು ಹೋಬಳಿ, ಹುಣಸೂರು ತಾಲ್ಲೂಕು ಆಗಿದೆ. ನನ್ನ ಬಳಿ ಆಧಾರ್ ಕಾರ್ಡ್, ಪಾನ್ ಕಾರ್ಡ್ ರೇಷನ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿ ಇದೆ. ಸದರಿ 4 ದಾಖಲೆಗಳಲ್ಲಿ ನನ್ನ ವಿಳಾಸ ಹಿಂಡಗುಡ್ಲು ಗ್ರಾಮದ್ದೆ ಇದೆ. ನನ್ನ ಸ್ವಂತ ಊರು ಹಿಂಡಗುಡ್ಲು ಆಗಿದ್ದು, 15-20 ವರ್ಷಗಳಿಂದ ಮೈಸೂರಿನಲ್ಲಿ ವಾಸವಿದ್ದೇನೆ. ನಾನು ಈಹಿಂದೆ ನಡೆದ ಚುನಾವಣೆಯಲ್ಲಿ ಹಿಂಡಗುಡ್ಲಿನಲ್ಲಿ ಮತ ಚಲಾಯಿಸಿದ್ದೇನೆ. ನಾನು BPL ರೇಷನ್ ಕಾರ್ಡ್ ಹೊಂದಿದ್ದೇನೆ. ನನ್ನ ಬಳಿ ಯಶಸ್ವಿನಿ ಕಾರ್ಡ್ ಇಲ್ಲ. ನನ್ನ ತಂದೆಯ ಊರು ಹಿಂಡಗುಡ್ಲು. ಹಿಂಡಗುಡ್ಲು ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಆಸ್ತಿ ಇಲ್ಲ ನನ್ನ ತಾಯಿಯ ಹೆಸರಿನಲ್ಲಿ ಇದೆ. ನನ್ನ ತಂದೆಯ ಮನೆಯಲ್ಲಿ ಈಗ 90 ವರ್ಷ ವಯಸ್ಸಿನ ತಾಯಿ ವಾಸವಿದ್ದಾರೆ. ಅಂಚೆ ಪೇದೆ ಯಾವುದಾದರೂ ನನಗೆ ಸಂಬಂಧಿಸಿದ ಪತ್ರವನ್ನು ನನ್ನ ತಾಯಿ ವಾಸವಿರುವ ಹಿಂಡಗುಡ್ಲು ವಿಳಾಸಕ್ಕೆ ಜಾರಿ ಮಾಡಲು ಹೋದರೆ ನಾನು ಮೈಸೂರಿನಲ್ಲಿ ವಾಸವಿದ್ದೇನೆ ಎಂದು ನನ್ನ ತಾಯಿ ಅಂಚೆ ಪೇದೆಗೆ ಹೇಳುತಾತರೆ.

ನಾನು ದ್ವಿತಿಯ PUC ಓದಿದ್ದೇನೆ. ನಾನು ವ್ಯವಸಾಯ ಮತ್ತು ತಳ್ಳುವ ಗಾಡಿಯಲ್ಲಿ ಫಾಸ್್ಟಫುಡ್ ವ್ಯಾಪಾರ ಮಾಡುತ್ತೇನೆ. ಮೈಸೂರಿನ ವರುಣಾ ಹೋಬಳಿಯ ದುದ್ದಗೆರೆ ಗ್ರಾಮದಲ್ಲಿ ವ್ಯವಸಾಯ ಮಾಡುತ್ತೇನೆ. ಅಲ್ಲಿ ಶುಂಠಿ ಬೆಳೆಯುತ್ತೇನೆ. ಹಾಗೂ ಲೀಜ್ ಗೆ ಕೂಡ ಶುಂಠಿ ಬೆಳೆಯುತ್ತೇನೆ. ಮೈಸೂರಿನ ದಿವಾನ್ಸ್ ರೋಡ್ ದೇವರಾಜಮೊಹಲ್ಲಾ, ಸ್ವಪ್ನ ಬುಕ್ ಎದುರುಗಡೆ ನನ್ನ ಫಾಸ್್ಟಫುಡ್ ಅಂಗಡಿ ಇದೆ. ನನ್ನ ಆಧಾರ್ ಕಾರ್ಡ್ ರೇಷನ್ ಕಾರ್ಡ್, ಪಾನ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಸದರಿ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಮುಂದಿನ

ದಿನಾಂಕದಲ್ಲಿ ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಪತ್ನಿಯ ಹೆಸರು ಪವಿತ್ರ.ಆರ್ ಅವರು ಲ್ಯಾಬ್ ಟೆಕ್ನಿಷಿಯನ್ ಆಗಿ ಕೆಲಸ ಮಾಡುತ್ತಾರೆ. ಅವರು ಹುಣಸೂರಿನಲ್ಲಿ ಕೆಲಸ ಮಾಡಿಲ್ಲ ಮೈಸೂರಿನಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಅವರ ಆಧಾರ್ ಕಾರ್ಡ್‌ನಲ್ಲಿ ಹಿಂಡಗುಡ್ಲು ವಿಳಾಸವೇ ಇದೆ. ನಾನು ಆದಾಯ ತೆರಿಗೆ ಪಾವತಿಸುವುದಿಲ್ಲ. ನನ್ನ ಬಳಿ 3 ಬ್ಯಾಂಕ್ ಖಾತೆಗಳಿವೆ. ನನ್ನ ಖಾತೆ SBI ಹುಣಸೂರಿನಲ್ಲಿಯೂ ಇದೆ. ಸದರಿ ಖಾತೆಯ ಖಾತೆ ಸಂಖ್ಯೆ ಹೇಳಲಾಗುವುದಿಲ್ಲ. ಸದರಿ ಖಾತೆಗೆ ಸಂಬಂಧಿಸಿದಂತೆ ಚೆಕ್ ಪುಸ್ತಕ ಪಡೆದುಕೊಂಡಿದ್ದೇನೆ. ನಿಪಿ-1 ರಲ್ಲಿರುವ ಖಾತೆ ಸಂಖ್ಯೆ 37837283529 ನನಗೆ ಸೇರಿದೆ. ನಿಪಿ-1ರ ಚೆಕ್ಕು ನನ್ನದಾಗಿದೆ. ನಾನು ಇಂಗ್ಲಿಷ್ ನಲ್ಲಿ ಸಹಿ ಮಾಡುತ್ತೇನೆ. ನಿಪಿ-1ರಲ್ಲಿರುವ ನಿಪಿ-1(ಎ) ಸಹಿ ನನ್ನದು. ಉಳಿದ ಬರವಣಿಗೆಗಳು ನನ್ನದಲ್ಲ. ದಿಃ 12.02.2021 ರಂದು ನಿಪಿ-4ರ ನೋಟಿಸ್ ನನ್ನ ಖಾಯಂ ವಿಳಾಸವಾದ ಹಿಂಡಗುಡ್ಲಿಗೆ ಜಾರಿಯಾಗಿತ್ತು ಎಂದರೆ ಗೊತ್ತಿಲ್ಲ. ಜನಗಣತಿಗೆ ಅಧಿಕಾರಿಗಳು ಬಂದಾಗ ನನ್ನ ಹಿಂಡಗೂಡ್ಲಿನ ವಿಳಾಸವನ್ನೇ ಹೇಳುತ್ತೇನೆ. ನನ್ನ ಮತ್ತು ಫಿರ್ಯಾದುದಾರರ ಮಧ್ಯೆ ವ್ಯವಹಾರ ನಡೆದಿದೆಯೇ ಇಲ್ಲವೆ ಎಂದರೆ ಇಲ್ಲ. ಫಿರ್ಯಾದುದಾರರು ನನಗೆ ಗೊತ್ತಿಲ್ಲ. ಅವರ ತಮ್ಮ ಕುಶಾಲ್ ಗೊತ್ತು. ಸದರಿ ಕುಶಾಲ್ ರವರ ಜೊತೆ ನೀವು ವ್ಯವಹಾರ ಮಾಡಿದ್ದಿರಾ ಎಂದರೆ ಇಲ್ಲ.

ನಾನು ಮತ್ತು ಫಿರ್ಯಾದುದಾರರು ಒಂದೇ ಜಾತಿಗೆ ಸೇರಿದವರು ಎಂದರೆ ಗೊತ್ತಿಲ್ಲ. ಸಾಕ್ಷಿಗೆ ಫಿರ್ಯಾದುದಾರರ ಆಧಾರ್ ಕಾರ್ಡ್‌ನ್ನು ತೋರಿಸಲಾಗಿ ಅದರಲ್ಲಿ ಅವರ ಹೆಸರು ರೇಖಾ ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ಈಗ ತೋರಿಸುತ್ತಿರುವ ದಾಖಲೆಯ ಪ್ರಕಾರ ಅದರಲ್ಲಿ ನಮೂದಿಸಿದ ಆಧಾರ್ ಸಂಃ 510549548775 ಎಂದರೆ ಸರಿ. ಫಿರ್ಯಾದುದಾರರು ನನಗೆ ಸಂಬಂಧಿಕರು ಎಂದರೆ ಸರಿಯಲ್ಲ. ದಿಃ 18.02.2016 ರಂದು ಫಿರ್ಯಾದುದಾರರು ತಮ್ಮ ಪತಿ ತೀರಿಕೊಂಡಾಗ ಅವರ ಹೆಸರಿಗೆ ಬಂದ ಮೈಸೂರು ಸಿಟಿ, ಕಿಲ್ಲೆಮೊಹಲ್ಲಾ, ರಾಚನಹಳ್ಳಿ ಜೆ.ಪಿ ನಗರ ಇ-ಬ್ಲಾಕ್, 11ನೇ ಕ್ರಾಸ್ ಮನೆ ಸಂ. 398ರ ವಿಸ್ತೀರ್ಣ 30x 20ರ ಮನೆಯನ್ನು ರಾಮಕೃಷ್ಣ ಬಿನ್ ಚಿಕ್ಕರಂಗಶೆಟ್ಟಿ ವಿಶ್ವೇಶ್ವರ ನಗರ, 1ನೇ ಕ್ರಾಸ್ ಮನೆ ನಂ.91ಎ ನಿವಾಸಿಗೆ ರೂ.25 ಲಕ್ಷಕ್ಕೆ ಮಾರಾಟ ಮಾಡಿದ್ದು ಅದರಲ್ಲಿ ಬಂದ ಹಣದ ಪೈಕಿ ರೂ. 5 ಲಕ್ಷವನ್ನು ಶುಂಠಿ ವ್ಯವಹಾರಕ್ಕಾಗಿ ನಾನು

ಫಿರ್ಯಾದುದಾರರರಿಂದ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರ MYS 1/08744/2015-16 ಎಂದು ನೋಂದಣಿಯಾಗಿದೆ ಎಂದರೆ ಗೊತ್ತಿಲ್ಲ. ನಾನು ಫಿರ್ಯಾದುದಾರರಿಂದ ನನ್ನ ಅವಶ್ಯಕತೆಗಾಗಿ ಅಂದರೆ ಶುಂಠಿ ವ್ಯವಸಾಯಕ್ಕಾಗಿ ರೂ. 5 ಲಕ್ಷ ಸಾಲ ಪಡೆದುಕೊಂಡಿದ್ದರೂ ಸಹ ಅದನ್ನು ತೀರಿಸಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಸಾಲ ಪಡೆದುಕೊಂಡಿಲ್ಲ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ನಿಪಿ-1ರ ಚೆಕ್ಕನ್ನು ಫಿರ್ಯಾದುದಾರರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಖಾಯಂ ವಿಳಾಸಕ್ಕೆ ಫಿರ್ಯಾದುದಾರರು ತಮ್ಮ ವಕೀಲರ ಮೂಲಕ ನೀಡಿದ ನೋಟೀಸ್ ಹೋಗಿದ್ದರೂ ಸಹ ಉದ್ದೇಶಪೂರ್ವಕವಾಗಿ ಅದನ್ನು ತಿರಸ್ಕರಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಫಿರ್ಯಾದುದಾರರು ಗೊತ್ತಿಲ್ಲ, ಅವರ ತಮ್ಮ ಕುಶಾಲ್ ಗೊತ್ತು ಎಂದು ಸುಳ್ಳು ಮಾಹಿತಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿಜವಾದ ವಿಳಾಸ ಗೊತ್ತಾಗುತದೆ ಎಂಬ ಕಾರಣಕ್ಕಾಗಿ ನನ್ನ ವಿಳಾಸದ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚುತ್ತೇನೆ ಎಂದರೆ ಸರಿಯಲ್ಲ.

(**ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.